ಪಿ.ಡಬ್ಲ್ಯು. 1

(ಇಂದು ದಿನಾಂಕ 26-09-2019 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ - ವಾದಿ ಪರ ಶ್ರೀಮತಿ ವಿ.ಬಿ.ಜೆ. ವಕೀಲರಿಂದ-**

ನಾನು ಈ ಪ್ರಕರಣದಲ್ಲಿ 1 ನೇ ವಾದಿ ಇದ್ದು, ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ನಾನು ಈಗಾಗಲೇ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು , ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದ್ರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಯನ್ನಾಗಿ ಗುರುತಿಸಲಾಗಿದೆ.

ನಿಶಾನೆ ಪಿ. 1 - ಸ.ನಂ. 6/1 ಗೋಕರ್ಣ ಗ್ರಾಮದ ಪಹಣಿಪತ್ರಿಕೆ

ನಿಶಾನೆ ಪಿ. 2 - ಸ.ನಂ. 6/2 ಗೋಕರ್ಣ ಗ್ರಾಮದ ಪಹಣಿಪತ್ರಿಕೆ

ನಿಶಾನೆ ಪಿ. 3 - ಸ.ನಂ. 6/3 ಗೋಕರ್ಣ ಗ್ರಾಮದ ಪಹಣಿಪತ್ರಿಕೆ

ನಿಶಾನೆ ಪಿ. 4 - ವಾದಿ ನಂ. 2 ರವರು ಸಲ್ಲಿಸಿದ ಖಾಸಗಿ ಫಿರ್ಯಾದು ನಂ. 278/17 ಇದರ ಕಚೇರಿ ಪ್ರತಿ. (ಪ್ರತಿವಾದಿಯರ ಪರ ವಕೀಲರು ಸಿವಿಲ್ ಪ್ರಕರಣದ ಬಗ್ಗೆ ಕ್ರಿಮಿನಲ್ ಕೇಸ ದಾಖಲಿಸಬಾರದು ಎಂದು ಸದ್ರಿ ದಾಖಲಾತಿಯನ್ನು ನಿಶಾನೆಗೊಳಪಡಿಸಲು ತಕರಾರು ಎತ್ತಿದ್ದು, ಯಾವುದೇ ಸಕಾರಣಗಳು ಇಲ್ಲದ ಕಾರಣ ತಕರಾರನ್ನು ವಜಾಗೊಳಿಸಲಾಯಿತು.)

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ